# ಮಕ್ಕಳಿಗೇನು ಬೇಕು? ಅವರನ್ನೇ ಕೇಳಿ...

ಪೌಷ್ಟಿಕಾಂಶಗಳಿಂದ ಕೂಡಿದ ಸಮತೋಲಿತ ಆಹಾರ ಮಕ್ಕಳಿಗೆ ಅಗತ್ಯ. ಮಕ್ಕಳ ದೈಹಿಕ ಆರೋಗ್ಯದ ಬಗ್ಗೆ ಸರ್ಕಾರ ಕೂಡ ಗಮನಹರಿಸುತ್ತದೆ. ಆದರೆ, ಎಳೆಯರ ಮಾನಸಿಕ ಬೆಳವಣಿಗೆಗೆ ಸಂಬಂಧಿಸಿದಂತೆ ಈ ಸಮತೋಲನ ಸಾಧಿಸುವ ಬಗ್ಗೆ ಗಮನಹರಿಸಿದ್ದೇವೆಯೇ?

ಮಕ್ಕಳ ಭವಿಷ್ಯದ ಬಗೆಗಿನ ನಮ್ಮ ನಿರೀಕ್ಷೆಗಳಾದರೂ ಎಂತಹವು? ಒಳ್ಳೆಯ ಶಾಲೆಯಲ್ಲಿ (ಅದು ಖಾಸಗಿ ಶಾಲೆಯೇ ಆಗಿರುತ್ತದೆ) ಓದಬೇಕು, ಪ್ರತಿ ಪರೀಕ್ಷೆಯಲ್ಲೂ ರ‍್ಯಾಂಕ್ ಗಳಿಸಬೇಕು, ಅಂತಿಮವಾಗಿ ಒಳ್ಳೆಯದೊಂದು ಕೆಲಸವನ್ನು ಹಿಡಿಯಬೇಕು ಎನ್ನುವುದರೊಂದಿಗೆ ಮಕ್ಕಳ ಕುರಿತ ನಮ್ಮ ನಿರೀಕ್ಷೆಗಳು ಕೊನೆಗೊಳ್ಳುತ್ತವೆ. ಇವೆಲ್ಲವೂ ಸಹಜವಾದ ಬಯಕೆಗಳೇ. ಆದರೆ, ಈ ಚೌಕಟ್ಟಿನಾಚೆಗೆ ಬೇರೆ ಸಾಧ್ಯತೆಗಳೇ ಇಲ್ಲವೇ? ಶಾಲೆ–ಉದ್ಯೋಗದ ಹೆದ್ದಾರಿಯಲ್ಲಿ ರೇಸು ಕುದುರೆಗಳಂತೆ ಓಡುವುದಷ್ಟೇ ಮಕ್ಕಳ ಭವಿಷ್ಯವೇ? ಹೊಸ ತಲೆಮಾರಿನ ಪೋಷಕರು ಉತ್ತರ ಕಂಡುಕೊಳ್ಳಬೇಕಾದ ಪ್ರಶ್ನೆಗಳಿವು. ಇತ್ತೀಚಿನ ದಿನಗಳಲ್ಲಿ ಕೆಲವು ತರುಣ ತರುಣಿಯರಾದರೂ ತಮ್ಮ ಲಕ್ಷಾಂತರ ರೂಪಾಯಿಗಳ ಸಂಬಳದ ಉದ್ಯೋಗಗಳನ್ನು ಬಿಟ್ಟು ಊರು–ಹೊಲವೆಂದು ನಗರಗಳಿಗೆ ಬೆನ್ನುಹಾಕುತ್ತಿರುವ ವಿದ್ಯಮಾನ ಕೂಡ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಒತ್ತಾಯಿಸುವಂತಿದೆ.

ಒಳ್ಳೆಯ ಉದ್ಯೋಗ ಹಾಗೂ ಅದರಿಂದ ದೊರೆಯುವ ಹಣ ಬದುಕಿಗೆ ಅಗತ್ಯ. ಆದರೆ, ಹಣದಿಂದಷ್ಟೇ ಸಂತೋಷ ದೊರೆಯುತ್ತದೆ ಎನ್ನುವುದು ಕೊಳ್ಳುಬಾಕ ಸಂಸ್ಕೃತಿ ಸೃಷ್ಟಿಸಿರುವ ಒಂದು ಭ್ರಮೆ. ವಾರ ಪೂರ್ತಿ ದುಡಿದು ಹೈರಾಣಾಗಿ ವಾರಾಂತ್ಯದಲ್ಲಿ ಸುಖವನ್ನು ಸೂರೆಗೊಳ್ಳುವಂತೆ ಮಾಲು ಮಲ್ಟಿಪ್ಲೆಕ್ಸುಗಳ ಮೊರೆ ಹೋಗುವ ತರುಣ ತರುಣಿಯರ ಪಾಲಿಗೆ ಬದುಕು ಅಲ್ಪಾಯುಷಿ. ಸ್ವಲ್ಪಕಾಲದ ನಂತರ ಸುಖದ ಬೇರೆ ದಾರಿಗಳ ಹುಡುಕಾಟ ಶುರುವಾಗುತ್ತದೆ. ಯೋಗಕೇಂದ್ರಗಳಲ್ಲಿ, ಧರ್ಮಕೇಂದ್ರಗಳಲ್ಲಿ ಸಂತೋಷವನ್ನು ಶುಲ್ಕ ಕೊಟ್ಟು ನಮ್ಮದಾಗಿಸಿಕೊಳ್ಳಲು ಹಂಬಲಿಸುತ್ತೇವೆ. ಈ ಹುಡುಕಾಟದಲ್ಲಿ ಸಂತೋಷವೆನ್ನುವುದು ನಮ್ಮೊಳಗೇ ರೂಪುಗೊಳ್ಳಬೇಕಾದ ಆಂತರಿಕ ಸಂಗತಿ ಎನ್ನುವುದನ್ನು ಮರೆತು, ಅದನ್ನೊಂದು ಸರಕಿನಂತೆ ಕಾಣತೊಡಗುತ್ತೇವೆ. ಸಮಸ್ಯೆ ಇರುವುದು ಸುಖ–ಸಂತೋಷವನ್ನು ಭೌತಿಕ ರೂಪದಲ್ಲಿ ಕಾಣಬಯಸುವ ನಮ್ಮ ಮನಃಸ್ಥಿತಿಯಲ್ಲಿ.

ಉದ್ಯೋಗ–ನೌಕರಿಯ ಬದುಕಿನಾಚೆಗೆ, ನಮ್ಮದೇ ಆದ ನೆಮ್ಮದಿಯ ವಲಯವೊಂದನ್ನು ಸೃಷ್ಟಿಸಿಕೊಳ್ಳುವುದು ಅನೇಕರಿಗೆ ಯಾಕೆ ಸಾಧ್ಯವಾಗುತ್ತಿಲ್ಲ? ಏಕೆಂದರೆ, ಅದಕ್ಕೆ ಅಗತ್ಯವಾದ ಸಿದ್ಧತೆಯೇ ಬಾಲ್ಯದಲ್ಲಿ ದೊರಕಿರುವುದಿಲ್ಲ. ಪಠ್ಯದಾಚೆಗಿನ ಜಗತ್ತಿಗೆ ಕುರುಡಾಗುವುದರಿಂದ ಉಂಟಾಗುವ ಅಪಾಯ ಇದು. ಸಂಗೀತ, ನೃತ್ಯ, ಸಾಹಿತ್ಯ, ಚಿತ್ರಕಲೆ, ಕ್ರೀಡೆ–ಹೀಗೆ ಯಾವುದಾದರೊಂದು ಹವ್ಯಾಸ ಶಾಲಾದಿನಗಳಲ್ಲಿಯೇ ಮೈಗೂಡುವುದು ಸಾಧ್ಯವಾದರೆ ಅವು ಜೀವನದುದ್ದಕ್ಕೂ ನಮ್ಮನ್ನು ಪೊರೆಯುತ್ತವೆ. ಆದರೆ, ಇವೆಲ್ಲ ಓದಿಗೆ ಅಡಚಣೆಯೆಂದು ಈ ಹೊತ್ತಿನ ಶಿಕ್ಷಣ ವ್ಯವಸ್ಥೆ ನಮ್ಮನ್ನು ನಂಬಿಸಲು ಹೊರಟಿದೆ. ಕಲೆಗಳ ಸಖ್ಯದಿಂದಾಗಿ ಮಕ್ಕಳ ಮನಸ್ಸು ವಿದ್ಯೆಯಿಂದ ಚಂಚಲಗೊಳ್ಳುವ ಆತಂಕ ಪೋಷಕರಿಗೂ ಇರುತ್ತದೆ. ವಾಸ್ತವವೆಂದರೆ, ಯಾವುದಾದರೊಂದು ಕಲೆಯ ಸಹವಾಸದಿಂದಾಗಿ ಮಕ್ಕಳ ಗ್ರಹಿಕೆಯ ಮಟ್ಟ ಹೆಚ್ಚುತ್ತದೆ, ವ್ಯಕ್ತಿತ್ವವೂ ಆಕರ್ಷಕವಾಗುತ್ತದೆ. ಬದುಕಿನಲ್ಲಿ ನೆಲೆ ಕಂಡುಕೊಂಡ ನಂತರ ಸಾಹಿತ್ಯ–ಸಂಗೀತದ ಬಗ್ಗೆ ಗಮನಹರಿಸಿದರಾಯಿತು ಎಂದು ನಂಬುವವರೂ ಇದ್ದಾರೆ. ಆದರೆ ಬಾಲ್ಯದಲ್ಲಿ ಬೆನ್ನು ಮಾಡುವ ಸಂಗತಿಗಳು ಮುಂದೊಂದು ದಿನ ಒಲಿಯುವುದು ಕಷ್ಟ.

ನಮ್ಮ ಸುತ್ತಮುತ್ತಲಿನ ಅಥವಾ ನಮ್ಮದೇ ಮನೆಗಳಲ್ಲಿನ ಹೆಣ್ಣುಮಕ್ಕಳನ್ನು ಗಮನಿಸಿನೋಡಿ. ಅವರಲ್ಲಿ ಬಹುತೇಕರಿಗೆ ಕುಟುಂಬದಾಚೆಗಿನ ಜಗತ್ತೇ ಇರುವುದಿಲ್ಲ. ಕುಟುಂಬದ ಸಂತೋಷಕ್ಕಾಗಿ ಅನವರತ ದುಡಿಯುತ್ತ ವಿಚಿತ್ರವಾದ ದುಗುಡದಲ್ಲಿ ಮುಳುಗಿರುತ್ತಾರೆ. ಏಕೆ ಹೀಗೆ? ಉತ್ತರ ಸರಳ. ಪ್ರವೃತ್ತಿಯೆನ್ನುವ ಮತ್ತೊಂದು ಕಿಟಕಿಯೇ ಅವರ ಬದುಕಿಗಿಲ್ಲ. ಅನುದಿನದ ಬದುಕನ್ನು ಸಹನೀಯಗೊಳಿಸಬಹುದಾದ ಸಂಗೀತವೋ ಸಾಹಿತ್ಯವೋ ಮತ್ತೊಂದು ಕಲೆಯ ನಂಟೋ ಇರುವುದಾದಲ್ಲಿ ಅದು ಅವರ ಜೀವಚೈತನ್ಯವನ್ನು ಪೊರೆಯುತ್ತಿರುತ್ತದೆ. ಇಂಥ ಅದೃಷ್ಟ ಎಷ್ಟು ಜನರಿಗಿದೆ?

ನಮ್ಮ ಮಕ್ಕಳಿಗೆ ಬಿಗಿದಿರುವ ಪಠ್ಯದ ಚೌಕಟ್ಟನ್ನು ಸಡಿಲಿಸಬೇಕಾದ ಜರೂರು ಇಂದಿನದು. ಶಿಕ್ಷಣ ಬದುಕಿಗೆ ಅತ್ಯಗತ್ಯ. ಅದರ ಜೊತೆಗೆ ಸಾಂಸ್ಕೃತಿಕ ಆವರಣವೊಂದನ್ನು ರೂಪಿಸುವುದೂ ಅಗತ್ಯ. ಅದು ನಾದವೋ ಬಣ್ಣವೋ ಆಟದ ಅಂಗಳವೋ ಯಾವುದಾದರೂ ಆಗಿರಬಹುದು. ಪ್ರತಿಯೊಂದು ಮಗುವಿಗೂ ಅದರದ್ದೇ ಆದ ಆಸಕ್ತಿಯೊಂದಿರುತ್ತದೆ. ಅದನ್ನು ಗುರ್ತಿಸುವುದು ಹಾಗೂ ಆ ಆಸಕ್ತಿಯ ವಿಕಾಸಕ್ಕೆ ಅಗತ್ಯವಾದ ವಾತಾವರಣವನ್ನು ರೂಪಿಸುವುದು ಪಾಲಕರ ಹೊಣೆಗಾರಿಕೆ. ಇಷ್ಟು ಕಾಲ ಮಕ್ಕಳಿಗೇನು ಬೇಕು ಎಂದು ದೊಡ್ಡವರು ನಿರ್ಧರಿಸಿದ್ದಾಯಿತು. ಈಗಲಾದರೂ ಮಕ್ಕಳಿಗೇನು ಬೇಕು ಎಂದು ಅವರನ್ನೇ ಕೇಳಿ ತಿಳಿಯುವ ಪ್ರಯತ್ನವನ್ನು ಹಿರಿಯರು ಮಾಡಬೇಕಿದೆ. ಆ ಪ್ರಯತ್ನಕ್ಕೆ ನವೆಂಬರ್ 14ರ 'ಮಕ್ಕಳ ದಿನಾಚರಣೆ' ಮುನ್ನುಡಿ ಬರೆಯಲಿ.

■ ರಘುನಾಥ ಚ.ಹ.

ಇಷ್ಟು ಕಾಲ ಮಕ್ಕಳಿಗೇನು ಬೇಕು ಎಂದು ದೊಡ್ಡವರು ನಿರ್ಧರಿಸಿದ್ದಾಯಿತು. ಈಗಲಾದರೂ ಮಕ್ಕಳಿಗೇನು ಬೇಕು ಎಂದು ಅವರನ್ನೇ ಕೇಳಿ ತಿಳಿಯುವ ಪ್ರಯತ್ನವನ್ನು ಹಿರಿಯರು ಮಾಡಬೇಕಿದೆ.

